846

ಪಸಾರೆ ಜಿನಸಿಗಳ ವಿವರ.

1 ಜೇನು, 2 ಜೇನುಮೇಣ, 3 ಕೆಂಪಲಾರಂಗು, 4 ಗೇರುಪಪ್ಪು, 5 ಹುಣಸೇಹಣ್ಣು, 6 ಹೊಂಗೇಕಾಯಿ, 7 ಬ್ಯಾಲದಹಣ್ಣು, 8 ಕಲ್ಲುಹುವ್ವು, 9 ಕಾಡುಹರಳು, 10 ಗೋಂದು, 11 ಮರಡಿಪಪ್ಪು, 12 ಕೀಗೇಕಾಯಿ, 13 ತಾರೇಕಾಯಿ, 14 ಪಪ್ಪಿಚಕ್ಕೆ, 15 ಅಳಲೇಕಾಯಿ, 16 ಕೀತಾಫಲ, 17 ಜಾಲಿಗುತ್ತ, 18 ಹೊಂಗೇ ಎಲೆ, 19 ಕಲ್ಲುಹುವ್ವು.

2. ಚೆಡರಖಾಸ್ತುದಾರರು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಕೇವಣಿ ಕಟ್ಟತಕ್ಕದ್ದು ಇದಕ್ಕೆ ತಪ್ಪಿದರೆ ಅವರನ್ನು ನಷ್ಟಕ್ಕೆ ಗುರಿ ಮಾಡಿ ಬಾಬು ದುಸರೇ ಹರಾಜು ಮಾಡಲ್ಪಡುವದು. ಆದರೆ ಆದರಿಂದ ಮುಂಟಾಗುವ ಆದಾಯದಲ್ಲಿ ಸದರೀಯವರಿಗೆ ಏನೂ ದೊರಿಯಲಾರದು. ಹರಾಜು ಮುಂಜೂರಾದ ಸಂಗತಿಯನ್ನು ಚಡಸವಾಲ್‌ದಾರ್‌ರಿಗೆ ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಸದರೀಯವರು ಪಾವತಿ ಮಾಡತಕ್ಕದ್ದು. ಅಪ್ಪರಲ್ಲೀ ಹಣ ಪಾವತಿ ಮಾಡಲು ತಪ್ಪಿದರೆ ದರಖಾಸ್ತುದಾರ್‌ರು ಮೊದಲು ಪಾವತಿ ಮಾಡಿದ ಕಾಲು ಹಿಸ್ಸೆ ಕೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ತಪ್ಪಿಸಲಾದೀತು. ಪೂರಾ ಮೊಬಲಗು ಪಾವತಿಯಾದ ನಂತರ ಹರಾಜು ಕಾಲದಲ್ಲಿ ಫಾಯಿಷಾಗುವ ಪರತ್ತುಗಳ ಕಂಡು ದರಖಾಸ್ತುದಾರರು ಕರಾರು ಬರದುಕೊಡಬೇಕಾಗಿದೆ. ಇದಕ್ಕೆ ತಪ್ಪಿದರೆ ಜಿನಸಿಯನ್ನು ರೂಢಿಸಲು ಅಪ್ಪಣೆ ಕೊಡಲ್ಪಡಲಾರದು. ಪೂರಾ ಹರಾಜು ಮೊಬಲಗಿನ ಮೇಲೆ ರೂಪಾಯಿಗೆ ಒಂದು ಆಣೆಯಂತೆ ಲೋಕಲ್‌ಸೆಸ್ ಕೊಡತಕ್ಕದ್ದು.

3. ಹರಾಜು ಡಿಪ್ಯೂಟಿ ಕಮ್ಮಿಷನರವರ ಮುಂಜೂರಾತಿಗೆ ವಳಪಟ್ಟಿರುತ್ತೆ.

4. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಮರಗಳ ಮತ್ತು ಸ್ವಂತ ಅನುಭವಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಲು ಹಕ್ಕಿರುವದಿಲ್ಲ.

5. ಇನಾಂದಾರರ, ಸ್ಥಿರಪಟ್ಟ ಹಕ್ಕುದಾರಿಗೆ ಇಜಾರೆದಾರ್‌ರು ಪ್ರವೇಶಿಸಕೂಡದು.

6. ಗ್ರಾಮ ಅನುಭವಯಿ ಫಲ ಹುಟ್ಟುವಳಿಯು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

7. ದರಖಾಸ್ತುದಾರರು ತಕ್ಕ ಸವಾಲ್ ಮಾಡದೆ ಹೋದರೆ ಹರಾಜು ಮಾಡುವ ಆಫಿಸರರು ಹರಾಜು ನಿಲ್ಲಿಸುವದಕ್ಕೂ ಅಥವಾ ಮುಂದೆ ಮತ್ತೊಂದು ವೇಳೆ ಹರಾಜು ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

ಯಂ. ಎಸ್. ನಾರಾಯಣರಾವ್,
ಡಿಪ್ಯೂಟಿ ಕಮ್ಮಿಷನರ್.

ಕೊಡಗು ಫಾರೆಸ್ಟ್ ಇಲಾಖೆ.

ನೋಟಿಸ್.

ತಾರೀಖು 7ನೇ ಸೆಪ್ಟಂಬರ್ 1896ನೇ ಇಸವಿ.

ಸ್ ೧೮೯೬ನೇ ಇಸವಿ ನವಂಬರ್ ತಾರೀಖು 25ರಲ್ಲು ಫ್ರೇಜರ್‌ಪೇಟೆಯಲ್ಲಿ ಹೆಚ್ಚು ಕಡಿಮೆ 120 ಟನ್ ಗಂಧ ಹರಾಜು ಹಾಕಲ್ಪಡುತ್ತದೆ.

ಷರತ್—ಸ್ ೧೮೯೫ನೇ ಇಸವಿ ಮೇ ತಿಂಗಳ ಕೊಡಗು ಡಿಸ್ಟ್ರಿಕ್ಟ್ ಗಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ಚೀಫ್ ಕಮ್ಮಿಷನರ್ ಸಾಹೆಬರವರ ಸ್ ೧೮೯೫ನೇ ಇಸವಿ ಏಪ್ರೆಲ್ ತಾರೀಖು 16ರ ನಂಬರ್ 4ರ ನೋಟಿಫಿಕೇರ್ಷ ಮೇರೆ ಕೀಕಡಾ 25ರಷ್ಟು ಕ್ರಯವನ್ನು ಹರಾಜುಕಾಲದಲ್ಲಿ ಕೊಡತಕ್ಕದ್ದು. ಬಾಕಿ ಮೊಬಲಗನ್ನು ಸ್ ೧೮೯೭ನೇ ಇಸವಿ ಮಾರ್ಚಿ ತಾರೀಖು 1ರ ವಳಗೇ ಸಾಕಲ್ಯವಾಗಿ ಪಾವತಿಮಾಡತಕ್ಕದ್ದು.

ಹರ್ಬ್. ವಿ,
ಕೊಡಗು ಫಾರೆಸ್ಟ್ ಡಿಪ್ಯೂಟಿ ಕನ್‌ಸರ್ವೇಟರ್.

ನೋಟಿಸ್.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟ್‌ಆಫಿಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಪಿಲ್ಲದೆ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುವಂಥಾ ಕೂಪನ್‌ಗಳ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರೀತಿ ಕೊಡುವ ಬಗ್ಯಾಗಿ ಆಪ್ಪಣೆ ಯಿಶುವದ್ದರಿಂದ ಇನ್ನು ಮೇಲೆ ಮೈಸೂರ ಕೇವೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ್ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರುಗಲಿ ಈ ಆಫಿಸನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಕಕ್ಕೂ ನಿಗೆ ಕೊಡಲ್ಪಡಲಾರದು.